## ತಲೆನೋವು



ಬೆಳಗ್ಗೆ ಕ್ಲಿನಿಕ್‌ನ ಬಾಗಿಲು ತೆರೆಯುತ್ತಿದ್ದಂತೆ ವೈದ್ಯರೆದುರು ಹಾಜರಾದ ವೆಂಕ, 'ನಮಸ್ಕಾರ ಡಾಕ್ಟ್ರೇ! ವಿಪರೀತ ತಲೆನೋವು. ಏನೂಂತ ಗೊತ್ತಾಗುತ್ತಿಲ್ಲ. ಸ್ವಲ್ಪ ನೋಡಿ' ಎಂದ. ಅವನನ್ನು ಪರೀಕ್ಷಿಸುತ್ತ ವೈದ್ಯರು, 'ಬರೀ ತಲೆನೋವಾ ಅಥವಾ ಜ್ವರ, ನೆಗಡಿ, ಕೆಮ್ಮು ಇನ್ನೂ ಏನಾದರೂ ಇದೆಯಾ?' ಎಂದು ಕೇಳಿದರು. ವೆಂಕ, 'ಅವೆಲ್ಲಾ ಏನೂ ಇಲ್ಲ ಡಾಕ್ಟ್ರೇ, ಬರೀ ತಲೆನೋವು ಅಷ್ಟೆ' ಎಂದ. ವೈದ್ಯರು, 'ಹೌದಾ? ಯಾವಾಗಿನಿಂದ ಈ ತಲೆನೋವು?' ಎಂದು ಪ್ರಶ್ನಿಸಿದರು. ಅದಕ್ಕೆ ವೆಂಕ, 'ಮದುವೆಯಾದ ದಿನದಿಂದ ಡಾಕ್ಟ್ರೆ' ಎಂದ.

**ಎಂ.ಕೆ. ಮಂಜುನಾಥ್**

## ಮೂರನೇ ಕುರಿ ಎಲ್ಲಿ?

ಭಾನುವಾರ ಶಾಲೆಗೆ ರಜೆ. ತುಂಟ ಹುಡುಗರಿಬ್ಬರು ತಿರುಗಾಡುತ್ತಾ ಶಾಲೆಯ ಬಳಿ ಬಂದರು. ಅಲ್ಲಿ ಕುರಿ ಮೇಯುತ್ತಿದ್ದುದನ್ನು ನೋಡಿದ ಅವರಿಗೆ ಕುಚೇಷ್ಟೆ ಮಾಡುವ ಬಯಕೆಯಾಯಿತು. ಮೂರು ಕುರಿಗಳನ್ನು ಹಿಡಿದು ಅವುಗಳ ಮೇಲೆ 1, 2 ಮತ್ತು 4 ಸಂಖ್ಯೆಯನ್ನು ಬರೆದು ಶಾಲೆಯ ಆವರಣದಲ್ಲಿ ಬಿಟ್ಟರು. ಉಳಿದ ಕುರಿಗಳನ್ನು ಆಚೆ ಅಟ್ಟಿ ಗೇಟು ಹಾಕಿಕೊಂಡು ಮನೆಗೆ ಹೋದರು. ಮಾರನೇ ದಿನ ಶಾಲೆಯ ಬಾಗಿಲು ತೆಗೆದವರಿಗೆ ಕುರಿಯ ಹಿಕ್ಕೆಗಳು ಕಂಡವು. ಶಾಲೆಯ ಸಿಬ್ಬಂದಿ ಹುಡುಕಿದಾಗ ಮೂರು ಕುರಿಗಳು ಸಿಕ್ಕವು. ಅವುಗಳ ಮೈಮೇಲೆ ಇದ್ದ 1, 2 ಮತ್ತು 4 ಸಂಖ್ಯೆಗಳನ್ನು ನೋಡಿದಾಗ ಇನ್ನೂ ಒಂದು ಕುರಿ ಇರಬೇಕೆಂದು ಅನ್ನಿಸಿತು. ಮಕ್ಕಳನ್ನೆಲ್ಲಾ ಮನೆಗೆ ಕಳಿಸಿ, ಎಲ್ಲರೂ ಎಷ್ಟು ಹುಡುಕಿದರೂ ಮೂರನೇ ಕುರಿ ಸಿಗಲಿಲ್ಲ. ಇದ್ದರೆ ತಾನೆ ಅದು ಸಿಗುವುದು! ಹುಡುಗರು ರಜೆ ಸಿಕ್ಕ ಖುಷಿಯಲ್ಲಿ ಮನೆಗೆ ತೆರಳಿದರು!




**ಬಿ.ಎಸ್. ರಾಜಲಕ್ಷ್ಮಿ**